ಪ್ರತಿಸ್ಪಂದನ

# ಗಡಿಗ್ರಾಮದ ಪ್ರತಿಭೆಗೆ ಮನ್ನಣೆ ಸಿಕ್ಕಿದೆ

◆ ಮಧ್ಯಂತರ ಪಾತ್ರ ಪ್ರವೇಶ ನಿಮಗೆ ಹೇಗೆನಿಸುತ್ತಿದೆ?

ಯಾವುದೇ ಸೀರಿಯಲ್‌ನ ಮಧ್ಯದಲ್ಲಿ ಹೊಸ ಪಾತ್ರವೊಂದು ಪ್ರವೇಶ ಮಾಡುವುದು ಭಯವನ್ನು ಹುಟ್ಟಿಸುತ್ತದೆ. ಅದರಲ್ಲೂ ನಾಯಕಿ ಪಾತ್ರ ಅಂದರೆ ಅದು ಮತ್ತಷ್ಟು ಹೆಚ್ಚೇ. ಜನ ಹೇಗೆ ಸ್ವೀಕರಿಸುತ್ತಾರೆ ಎನ್ನುವುದು ಮೊದಲ ಸವಾಲು. ಚೆನ್ನಾಗಿ ನಿರ್ವಹಿಸಲೇಬೇಕು ಎನ್ನುವ ಒತ್ತಡವೂ ಕಾಡುತ್ತದೆ. ಈಗ ರಾಧೆಯ ಪ್ರವೇಶ ಅನಿವಾರ್ಯವಾಗಿದೆ. ನಾನೂ ಹಿಂದಿನ ಹತ್ತಾರು ಕಂತುಗಳನ್ನು ನೋಡಿದ್ದೇನೆ. ಕೌಟುಂಬಿಕ ಕಥನದ ನಿರೂಪಣೆ ಚೆನ್ನಾಗಿದೆ ಎಂದೇ ಭಾವಿಸಿದ್ದೇನೆ. ಕೃಷ್ಣ ಪಾತ್ರ ಚೆನ್ನಾಗಿದೆ. ಈಗಾಗಲೇ ನಾಣ್ಯವೊಂದರ ಒಂದು ಮುಖ ಗೊತ್ತಾಗಿದೆ. ಮತ್ತೊಂದು ಮುಖ ಅನಾವರಣವಾಗುತ್ತಿದೆ. ಕೃಷ್ಣ–ರಾಧೆಯರ ನಡುವೆ ಸಣ್ಣ ಸಂಘರ್ಷ ಏರ್ಪಟ್ಟಿದೆ.

◆ 'ಪುಟ್ಟಕ್ಕನ ಮಕ್ಕಳು' ಪಾತ್ರದಿಂದ ಹೊರಬಂದಿದ್ದೀರಾ ಹೇಗೆ?

ಅದು ನಾಯಕಿಯ ಪಾತ್ರ ಆಗಿದ್ದರೂ ಮಧ್ಯದಲ್ಲಿಯೇ ಪ್ರವೇಶ ಮಾಡಿದ್ದೆ. ಅದರಲ್ಲಿ ಉಮಾಶ್ರೀ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅವರ ಎದುರು ನನ್ನ ಪಾತ್ರ ನಿಭಾಯಿಸುವುದು ಸವಾಲಿನ ಕೆಲಸವಾಗಿತ್ತು. ಒಳ್ಳೆಯ ಹೆಸರು ಬರುತ್ತೆ ಎನ್ನುವ ವಿಶ್ವಾಸವೂ ಇತ್ತು. ಒಂದೆರಡು ದಿನಗಳಲ್ಲಿ ಆ ಪಾತ್ರಕ್ಕೆ ಸೆಟ್ ಆದೆ. ಅದು ಅಪಾರ ಜನಪ್ರಿಯತೆಯನ್ನು ತಂದು ಕೊಟ್ಟಿತು. ಈಗಲೂ ಜನ ಸ್ನೇಹಾ ಎಂದೇ ಗುರುತಿಸುತ್ತಾರೆ.

◆ ತೆರೆಗೆ ಬರುವ ಮೊದಲು ಏನು ಮಾಡ್ತಾ ಇದ್ರಿ?

ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಹಣಕಾಸು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಕೊರೊನಾ ಸಮಯದಲ್ಲಿ 'ಕನ್ಯಾದಾನ'ಕ್ಕೆ ಅವಕಾಶ ಬಂತು. ಆಗ ಕೆಲಸದ ಜೊತೆ ಅಭಿನಯವನ್ನೂ ಮಾಡುತ್ತಿದ್ದೆ. ಕೆಲಸದ ಜೊತೆ ನಟನೆ ಮಾಡುವುದು ಕಷ್ಟ ಆಯಿತು. ಆರು ತಿಂಗಳು ಕಳೆಯುವಷ್ಟರಲ್ಲಿ ಸಾಕಾಯಿತು. ಔಟ್‌ಡೋರ್ ಚಿತ್ರೀಕರಣ ಇದ್ದರೆ ಫುಟ್‌ಪಾತ್ ಮೇಲೆ ಕೂತು ಕೆಲಸ ಮಾಡಿದ್ದೇನೆ. ಬಣ್ಣ ಹಚ್ಚಿಕೊಂಡೇ ಆನ್‌ಲೈನ್ ಮೀಟಿಂಗ್ ಹಾಜರಾಗುತ್ತಿದ್ದೆ. ಇದನ್ನು ಮಾಡದೆ ಬೇರೆ ವಿಧಿ ಇರಲಿಲ್ಲ. ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 9 ಗಂಟೆಯತನಕ ಚಿತ್ರೀಕರಣ ನಡೀತಿತ್ತು. ಪಿಜಿಗೆ ಬಂದು ಸೇರಿದ ಮೇಲೆ ರಾತ್ರಿ 12ರ ತನಕ ಕೆಲಸ ಮಾಡುತ್ತಿದ್ದೆ. ಆರು ತಿಂಗಳ ನಂತರ ಕೆಲಸ ಬಿಟ್ಟೆ. ಅಷ್ಟರಲ್ಲಿ ತೆಲುಗು ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು. 'ರಾಮಾಚಾರಿ', 'ಪುಟ್ಟಕ್ಕನ ಮಕ್ಕಳು', ಈಗ ಇದು.



**ವಿದ್ಯಾ ರಾಜ್**
ಸ್ಟಾರ್ ಸುವರ್ಣ 'ನೀ ಇರಲು ಜೊತೆಯಲಿ' ರಾಧಾ
■ ರಾಘವೇಂದ್ರ ಕೆ.

◆ ಅಭಿನಯದ ಪಯಣದಲ್ಲಿ ಬೇಸರ ಅನ್ನಿಸಿದ್ದು ಇದೆಯಾ?

ಶುರುವಿನಲ್ಲಿ ಒಮ್ಮೆ ಅನ್ನಿಸಿತ್ತು. ಬೆಳಿಗ್ಗೆ 6ಕ್ಕೆ ಚಿತ್ರೀಕರಣಕ್ಕೆ ಬಂದಿದ್ದೆ. ರಾತ್ರಿ 10 ಗಂಟೆಯಾದರೂ ಪ್ಯಾಕಪ್ ಆಗಿರಲಿಲ್ಲ. ಕಚೇರಿಯಲ್ಲಿ ಆರು ಗಂಟೆ ಕೆಲಸ ಮಾಡಿದರೆ ಮುಗಿಯುತಿತ್ತು. ಅದೆಲ್ಲ ನೆನಪಾಗಿ ಇಲ್ಲಿಗೆ ಬಂದು ತಗಲಾಕೊಂಡೆ ಎಂದೆನಿಸಿತ್ತು. ಹೀಗಾದರೆ ಮನೆಗೆ ಹೋಗುವುದು ಹೇಗಪ್ಪ. ಮಧ್ಯದಲ್ಲಿಯೇ ಇದನ್ನು ಬಿಡಲು ಆಗುವುದಿಲ್ಲ ಎಂದು ಕೊರಗಿದೆ. ಇಲ್ಲಿನ ಪರಿಸ್ಥಿತಿ ಹೊಂದಿಕೊಳ್ಳಲು ಕೆಲ ತಿಂಗಳು ಕಳೆದವು. ಈಗ ಎಲ್ಲ ಅರ್ಥ ಆಗಿದೆ. ಇದಕ್ಕೆ ನಾನು ಹೊಂದಿಕೊಳ್ಳಬೇಕು. ಇಷ್ಟ ಇರುವುದನ್ನು ಮಾಡುವುದಕ್ಕೆ ಅದೆಲ್ಲ ಕಷ್ಟ ಅನ್ನಿಸುವುದಿಲ್ಲ.

◆ ಈ ಪ್ಯಾಶನ್ ಹುಟ್ಟಿದ್ದು ಹೇಗೆ?

ಶಾಲಾ ದಿನಗಳಿಂದಲೂ ಪ್ರದರ್ಶನ ಕಲೆಯಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದೆ. ಪ್ರೌಢಶಾಲೆಯಿಂದ ಪದವಿ ಮುಗಿಯುವ ತನಕ ಚಾಮರಾಜನಗರದ ಹೆಣ್ಣುಮಕ್ಕಳ ವಿದ್ಯಾ ಸಂಸ್ಥೆಯಲ್ಲಿ ಓದಿದೆ. ಆಗಲೇ ಡಾನ್ಸ್–ನಾಟಕ ಮಾಡಲು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದೆ. ಕ್ರೀಡಾಕೂಟದಲ್ಲಿಯೂ ಮುಂದೆ ಇರುತ್ತಿದ್ದೆ. ಟೇಬಲ್ ಟೆನ್ನಿಸ್, ವಾಲಿಬಾಲ್ ಅಂತರ ವಿಶ್ವವಿದ್ಯಾಲಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೆ. ಪದವಿ ಹಂತದಲ್ಲಿ ಸ್ಥಳೀಯ ವಾಹಿನಿಯೊಂದರಲ್ಲಿ ನಿರೂಪಣೆ ಮಾಡುತ್ತಿದ್ದೆ. ಕರಕುಶಲ ಆಭರಣಗಳನ್ನೂ ತಯಾರಿಸುತ್ತಿದ್ದೆ. ಅದನ್ನು ಕಾಲೇಜಿನಲ್ಲಿ ಮಾರಾಟ ಮಾಡುತ್ತಿದ್ದೆ. ಆ ಕ್ರಿಯಾಶೀಲ ಗುಣ ಮತ್ತು ದಿಟ್ಟತನದ ಸ್ವಭಾವ ಈ ಕ್ಷೇತ್ರಕ್ಕೆ ಕರೆದು ತಂದಿದೆ.

◆ ಯಾವುದೇ ಪಾತ್ರದ ಆಯ್ಕೆಯ ಮಾನದಂಡ ಏನು?

ಮೊದಲು ನಮ್ಮನ್ನು ತಂಡದವರು ಆಯ್ಕೆ ಮಾಡಿಕೊಳ್ಳುತ್ತಾರೆ. ಹೊಸತರಲ್ಲಿ ಆಯ್ಕೆಗೆ ಅವಕಾಶ ಇರುವುದಿಲ್ಲ. ಸಾಮಾನ್ಯ ಹುಡುಗಿಯ ಪಾತ್ರ ಸಿಕ್ಕಿತ್ತು. ಆನಂತರ 'ಯಜಮಾನ' ಲುಕ್ ಟೆಸ್ಟ್ ಕೊಟ್ಟಿದ್ದೆ. ಅದಾಗಲಿಲ್ಲ. 'ರಾಮಾಚಾರಿ'ಗೆ ಅವಕಾಶ ಬಂತು ನೆಗೆಟಿವ್ ಎಂದು ಹಿಂದೇಟು ಹಾಕಿದ್ದೆ. ರಾಮ್‌ಜೀ ಕರೆದು ಪಾತ್ರದ ಬಗ್ಗೆ ಹೇಳಿದರು. ನಟನೆಯಲ್ಲಿ ಕಲಿಯುವುದು ತುಂಬ ಇದೆ ಎನ್ನುವುದು ರುಕ್ಕು ಪಾತ್ರವನ್ನು ಒಪ್ಪಿದ ಮೇಲೆ ಗೊತ್ತಾಯಿತು. ನಂತರ 'ಪುಟ್ಟಕ್ಕನ ಮಕ್ಕಳು' ತುಂಬ ಇಷ್ಟ ಆಯಿತು. ಇದಾದ ಮೇಲೆ ಹೊಸ ಸೀರಿಯಲ್ ಮಾಡಬೇಕು ಅಂತ ಇದ್ದೆ. ಎರಡ್ಮೂರು ಸೀರಿಯಲ್‌ಗೆ ಲುಕ್ ಟೆಸ್ಟ್ ಕೊಟ್ಟಿದ್ದೇನೆ. ಕಥೆಯನ್ನೂ ಕೇಳಿದ್ದೇನೆ. ಪುಟ್ಟಕ್ಕನ ಮಕ್ಕಳು ರೀತಿಯ ಪಾತ್ರವೇ ಬರುತ್ತಿತ್ತು. ಇದರಲ್ಲಿ ಮುಗ್ಧ ಹುಡುಗಿಯ ಪಾತ್ರವನ್ನು ಮಾಡಿದ್ದೇನೆ.

◆ ಕಿರುತೆರೆಯ ಅನುಭವದಿಂದ ಏನು ಕಲಿತಿದ್ದೀರಿ?

ತಾಳ್ಮೆ ಹೆಚ್ಚು ಮುಖ್ಯ. ಶಿಸ್ತು ನಮ್ಮನ್ನು ಮುನ್ನಡೆಸುತ್ತದೆ. ಆತ್ಮವಿಶ್ವಾಸವನ್ನು ಈ ರಂಗ ನನಗೆ ಕೊಟ್ಟಿದೆ. ಎಲ್ಲೇ ಹೋದರು ಬದುಕುತ್ತೇನೆ ಎನ್ನುವ ಧೈರ್ಯ ಇದೆ. ಸಂತೋಷದ ಸಂಗತಿ ಎಂದರೆ ನನಗೆ ಐಡೆಂಟಿಟಿ ಸಿಕ್ಕಿದೆ. ಜನ ಗುರುತಿಸಿ ಮಾತನಾಡುತ್ತಾರೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ ನನಗೆ ಸಿಕ್ಕಿದೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬಳಚವಾಡಿ ಗ್ರಾಮದ ಸಾಮಾನ್ಯ ಹುಡುಗಿಯ ಪ್ರತಿಭೆಗೆ ಅವಕಾಶ ಸಿಕ್ಕಿದೆ. ಕಲಾವಿದೆ ಎನ್ನುವ ಮನ್ನಣೆ ಅಷ್ಟೇ ಸಾಕು. ■